ಉತ್ತರ

ಅ. ಇಲ್ಲ

ಆ. ಉದ್ಭವಿಸುವುದಿಲ್ಲ

ಬಿಜಾಪುರ ತಾಲ್ಲೂಕಿನಲ್ಲಿ ಬರುವ ಐತಿಹಾಸಿಕ ಸ್ಥಳಗಳ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1087(1352)

ಸದಸ್ಯರ ಹೆಸರು: ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ(ಬಸವನಬಾಗೇವಾಡಿ)

ಉತ್ತರಿಸುವ ಸಚಿವರು: ಶ್ರೀಮತಿ ರಾಣಿ ಸತೀಶ್(ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಪ್ರಶ್ನೆ

ಅ) ಬಿಜಾಪುರ ತಾಲ್ಲೂಕಿನಲ್ಲಿ ಬರುವ ಐತಿಹಾಸಿಕ ಜನ್ಮ ಸ್ಥಳ ಮತ್ತು ಐಕ್ಯ ಸ್ಥಳ ಶರಣ ಹರುಳಯ್ಯನವರ ಹರಳಯ್ಯನ ಗುಂಡ ಹಾಗೂ ಉಪ್ಪಿಲದಿನ್ನಿ ಶ್ರೀ ಸಂಗಮೇಶ್ವರ ದೇವಸ್ಥಾನ ಹಾಗೂ ಬಸವನ ಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮದ ಐಕ್ಯಸ್ಥಳ ಮುಂತಾದ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಉತ್ತರ

ಅ) ಈ ಇಲಾಖಾ ವತಿಯಿಂದ ಪ್ರಸ್ತುತ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಆಶ್ರಯ ಯೋಜನೆ ಮನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1089(1076)

ಸದಸ್ಯರ ಹೆಸರು: ಶ್ರೀ ಚಲುವರಾಯಸ್ವಾಮಿ.ಎನ್(ನಾಗಮಂಗಲ)

ಉತ್ತರಿಸುವ ಸಚಿವರ ಹೆಸರು: ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು)

ಪ್ರಶ್ನೆ

ಅ. ರಾಜ್ಯದಲ್ಲಿ ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೆ ಆಶ್ರಯ ಯೋಜನೆಯಡಿಯಲ್ಲಿ ಖರ್ಚಾಗಿರುವ ಹಣವೆಷ್ಟು?

ಆ. ನಾಗಮಂಗಲ ತಾಲ್ಲೂಕಿಗೆ ಕಳೆದ ಮೂರು ವರ್ಷಗಳಿಂದ 2001ರ ಡಿಸೆಂಬರ್ ಅಂತ್ಯದವರೆಗೂ ಆಶ್ರಯ ಯೋಜನೆಗೆ ಖರ್ಚಾಗಿರುವ ಹಣವೆಷ್ಟು? (ವಿವರ ನೀಡುವುದು)

ಉತ್ತರ

ಅ)	ಸಹಾಯಧನ	ರೂ. 21691.86 ಲಕ್ಷಗಳು
	ಸಾಲ	ರೂ. 27994.36 ಲಕ್ಷಗಳು
ಆ.	ಸಹಾಯಧನ	ರೂ. 121.38 ಲಕ್ಷಗಳು
	ಸಾಲ	ರೂ. 61.17 ಲಕ್ಷಗಳು

ನಾಗಮಂಗಲ ತಾಲ್ಲೂಕಿಗೆ ಮಂಜೂರಾಗಿರುವ ಗ್ರಂಥಾಲಯಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1090(1078)

ಸದಸ್ಯರ ಹೆಸರು: ಶ್ರೀ ಚಲುವರಾಯ ಸ್ವಾಮಿ.ಎನ್(ನಾಗಮಂಗಲ)

ಉತ್ತರಿಸುವ ಸಚಿವರು: ಶ್ರೀ ಬಾಬುರಾವ್ ಚವ್ವಾಣ್(ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಪ್ರಶ್ನೆ

ಅ) ಮಂಡ್ಯ ಜಿಲ್ಲೆಯಲ್ಲಿ ವಯಸ್ಕರ ಶಿಕ್ಷಣ ಇಲಾಖೆ ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ನಾಗಮಂಗಲ ತಾಲ್ಲೂಕಿಗೆ ಇಲ್ಲಿಯವರೆಗೆ ಮಂಜೂರಾಗಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು? ಮುಂದೆ ಮಂಜೂರಾಗುವ ಗ್ರಂಥಾಲಯಗಳು ಯಾವುವು? ವಿವರ ನೀಡುವುದು.